**ಸಾಕ್ಷಿಗೆ ದಿನಾಂಕ 08-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದಿ ಪರ ವಕೀಲರಿಂದ:**

ನಾನು 9 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಕೃಷಿ ಹಾಗೂ ಪಶುಸಾಕಾಣಿಕೆ ಮಾಡುತ್ತೇನೆ. ಪಿರ್ಯಾದುದಾರರು ನಮ್ಮ ಊರಿನವರೇ ಆಗಿರುತ್ತಾರೆ,ಹುಟ್ಟಿದಾಗಿನಿಂದಲೂ ಪರಿಚಯ. ನಿಪಿ 1 ರಲ್ಲಿರುವ ಸಹಿಯು ನನ್ನಾದಾಗಿರುವುದಿಲ್ಲ. ಆದರೆ, ಆ ಚೆಕ್ ನನ್ನದು. ಅದು ಪಾಲನಜೋಗಹಳ್ಳಿ ಶಾಖೆಯ ಕೆನರಾ ಬ್ಯಾಂಕ್‌ನ ಚೆಕ್ ಆಗಿರುತ್ತದೆ. ನಿಪಿ 5 ರಲ್ಲಿರುವ ವಿಳಾಸವು ನನ್ನದೇ ಆಗಿರುತ್ತದೆಂದರೆ ಸರಿ. ಸದರಿ ದಾಖಲೆಯಲ್ಲಿರುವ ಸಹಿಯು ನನ್ನ ತಂದೆಯಾಗಿರುತ್ತದೆಂದರೆ ಸಾಕ್ಷಿಯು ನೋಡಿ ಗುರುತಿಸಿದ್ದ ಸಹಿಯನ್ನು ನಿಪಿ 5 (ಎ) ಎಂದು ಗುರುತಿಸಲಾಯಿತು. ನೋಟಿಸ್ ನ್ನು ನನ್ನ ಪರವಾಗಿ ನಮ್ಮ ತಂದೆಯವರು ಸ್ವೀಕರಿಸಿರುತ್ತಾರೆ. ಪಿರ್ಯಾದಿಯು ಕಳುಹಿಸಿದ ನೋಟೀಸ್ ಗೆ ನಾನು ಪ್ರತ್ಯುತ್ತರ ನೀಡಿರುವುದಿಲ್ಲ. ಪಿರ್ಯಾದುದಾರರು ನನ್ನ ಚೆಕ್ ನ್ನು ದೂರುಪಯೋಗಪಡಿಸಿಕೊಂಡಿರುತ್ತಾರೆಂದು ಯಾವುದೇ ದೂರನ್ನು ಠಾಣೆಯಲಿ ದಾಖ್ಯಲಿಸಿರುವುದಿಲ್ಲ.

ಚೆಕ್ ಪುಸ್ತಕ ಕಳೆದು ಹೊಗಿರುತ್ತದೆಂದು 2013 ರಲ್ಲಿ ದೂರನ್ನು ದಾಖಲಿಸಿರುತ್ತೇನೆ. ದೂರು ದಾಖಲಿಸಿದ ಬಗ್ಗೆ ದೂರಿನ ಪ್ರತಿಯು ನನ್ನ ಬಳಿ ಇರುವುದಿಲ್ಲ. 2011 ರಲ್ಲಿ ನಾನೇ ಸ್ವತಃ ಯಾವುದೇ ವ್ಯವಹಾರಗಳನ್ನು ಖಾತೆಯ ಮೂಲಕ ಮಾಡುತ್ತಿಲ್ಲವೆಂದು ಆ ಖಾತೆಯನ್ನು ಮುಚ್ಚಿ ರುತ್ತೇನೆ. 2011 ರಲ್ಲಿ ಖಾತೆ ಮುಚ್ಚಿ ರುವ ವಿಷಯ ಹಾಗೂ 2013 ರಲ್ಲಿ ದೂರು ದಾಖಲಿಸಿದ ವಿಷಯದ ಬಗ್ಗೆ ಪಿರ್ಯಾದಿಗೆ ಮಾಹಿತಿ ಇರುವುದಿಲ್ಲ. ಸದರಿ ವಿಷಯಗಳನ್ನು ಪ್ರತ್ಯುತ್ತರ ಮೂಲಕ ಪಿರ್ಯಾದಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನೋಟಿಸ್ ಬಂದ ನಂತರ ಅದರ ವಿಷಯವು ನನ್ನ ತಂದೆ ನನಗೆ ತಿಳಿಸಿರುವುದಿಲ್ಲ, ನೋಟೀಸ್ ನ್ನು ಹಾಗೇ ಎಲ್ಲಿಯೇ ಇಟ್ಟಿರುತ್ತಾರೆ. ನಾನು ಮತ್ತು ನನ್ನ ತಂದೆಯೂ ಒಂದೇ ಮನೆಯಲ್ಲಿಯೇ ವಾಸಿಸುತ್ತೇವೆ. ನೋಟೀಸ್ ಬಂದ ವಿಷಯವನ್ನು ನನ್ನ ತಂದೆಯು ನನಗೆ ತಿಳಿಸಿರುವುದಿಲ್ಲ. ನನ್ನ ತಂದೆಯನ್ನು ಸಾಕ್ಷಿ ಮಾಡಿಸಲಾಗುವುದಿಲ್ಲ . ಅವರು ಮೃತಪಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ನೋಟೀಸ್ ಬಂದ ಬಗ್ಗ ನನ್ನ ತಂದೆ ನನಗೆ ತಿಳಿಸದೆ ಇದ್ದ ಬಗ್ಗೆ ಸಾಕ್ಷಿ ನುಡಿದಿರುವುದಿಲ್ಲ.

ಪಿರ್ಯಾದುದಾರರು ಸಣ್ಣ ಪುಟ್ಟ ಚಿಲ್ಲರೆ ಅಂಗಡಿ ಮಾಡುವವರಿಗೆ ಹಣದ ಸಹಾಯ ಮಾಡುತ್ತಿದ್ದ ಬಗ್ಗೆ ನನಗೇ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮತ್ತು ಪಿರ್ಯಾದಿಯ ನಡುವೆ ಒಳ್ಳೆ ಮಾತುಕತೆ ಇರುತ್ತದೆ. ನಿಪಿ 1 ರಲ್ಲಿ ಕನ್ನಡದಲ್ಲಿ ಸಹಿ ಇರುತ್ತದೆ. ನಾನು ಸಹ ಕನ್ನಡದಲ್ಲಿಯೇ ಸಹಿ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮಾಡಿದ ಸಹಿಯು ಹಾಗೂ ನಿಪಿ 1 ರಲ್ಲಿನ ಸಹಿಯು ಒಂದೇ ಯಾಗಿರುತ್ತದೆಂದರೆ ಸರಿ. ಖಾತೆಯನ್ನು ನಾನೇ ಮುಚ್ಚಿ ರುತ್ತೇನೆ.

ನಿಪಿ 1 ಮಾತ್ರ ಕಳೆದು ಹೋಗಿರುತ್ತದೆಂದು ದೂರನ್ನು ನೀಡಿರುತ್ತೇನೆ. ದೂರು ದಾಖಲಿಸಿದ್ದೇ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳಿರುವುದಿಲ್ಲ. ಪಿರ್ಯಾದುದಾರರು ನನಗಿಂತ ಆರ್ಥಿಕವಾಗಿ ಸಮರ್ಥವಾಗಿರುತ್ತಾರೆಂದರೆ ಸರಿ. 2016 ರಲ್ಲಿ ಪಿರ್ಯಾದುದಾರರ ಬಳಿ 3 ಲಕ್ಷ ರೂ ಸಾಲ ಪಡೆದಿರುತ್ತೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**
**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**